<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>

**ಫೌಜದಾರಿ ಪ್ರಕರಣ ಸಂಖ್ಯೆ: 32/2017**

**ಸರಕಾರದ ಪರವಾಗಿ ಃ ಪೋಲೀಸ್ ಠಾಣೆ ಸೇಡಂ**

//ವಿರುದ್ಧ//

**ಆರೋಪಿ :** ಬಸಪ್ಪ ತಂದೆ ಮಾಳಪ್ಪ ಬಾದೆಪೂರ
ವಃ 42 ವರ್ಷ, ಉಃ ಡ್ರೈವರ ಕೆಲಸ
ಸಾಃ ಹೋಸಕೇರಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.1/ಪ್ರಾಸಾ.1 ಶರಣಬಸು ತಂದೆ ಅಮರಪ್ಪ ಇಟಗಿ , ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29.11.2021 ರಂದು, ಇವರ ಹೆಂಡತಿಯ ತಮ್ಮನ ಹೆಸರು ಯಲ್ಲಪ್ಪ ತಂದೆ ಸುರೇಶ ಶಿರ ಅಂತಾ ಇರುತ್ತದೆ, ಆತ ಈಗ 5-6 ವರ್ಷಗಳ ಹಿಂದೆ ಹಿಟಾಚಿ ಯಂತ್ರದ ವಾಹನದ ಮೇಲೆ ಕ್ಲೀನರ್ ಅಂತಾ ಕೆಲಸ ಮಾಡುತ್ತಿದ್ದನು , ದಿಃ 28.11.2016ರಂದು ರಾತ್ರಿ 10.00ಗಂಟೆಗೆ ಹಿಟಾಚಿ ವಾಹನದ ಚಾಲಕನಾದ ಚಾಸಾ-4 ಇವರು ಇವರಿಗೆ ಪೋನ ಮೂಲಕ ರಾತ್ರಿ 08.30ಗಂಟೆಗೆ ಸದರಿ ಯಲ್ಲಪ್ಪನಿಗೆ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ, ಅಪಘಾತದಿಂದ ಯಲ್ಲಪ್ಪನಿಗೆ ಗಾಯಗಳಾಗಿ ತಲೆಯಿಂದ ರಕ್ತ ಬಂದು ಸ್ಥಳದಲ್ಲಿಯೇ ತೀರಿಕೊಂಡಿರುತ್ತಾನೆ ಅಂತಾ ತಿಳಿಸಿದನು, ಅದೇ ರೀತಿ ಚಾಸಾ-4 ಹಿಟಾಚಿ ವಾಹನ ನಡೆಸುತ್ತಿದ್ದರು ಎಂದು ಸಹ ಹೇಳಿರುತ್ತಾರೆ, ಹಿಟಾಚಿ ವಾಹನಕ್ಕೆ ಲೈಟಿನ ಬೆಳಕು ಇರಲಿಲ್ಲ ಅದಕ್ಕೆ ಯಲ್ಲಪ್ಪ ದ್ವಿಚಕ್ರ ವಾಹನದ ಮೂಲಕ ಬೆಳಕು ತೋರಿಸುತ್ತಾ ಹೊರಟ್ಟಿದ್ದು ಟಿಪ್ಪರ ವಾಹನ ಎದುರಿನಿಂದ ಬಂದು ಹಾಯಿಸಿ ಅಪಘಾತಪಡಿಸಿರುತ್ತದೆ, ಆಗ ಇವರು , ಚಾಸಾ-5, 7 ಕೂಡಿಕೊಂಡು ಅಪಘಾತವಾದ ಸ್ಥಳಕ್ಕೆ ಹೋಗಿರುತ್ತಾರೆ, ಇವರು ಹೋದಾಗ ಯಲ್ಲಪ್ಪ ತೀರಿಕೊಂಡಿದ್ದು ಇತ್ತು, ಅಪಘಾತವು ಟಿಪ್ಪರ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ, ಟಿಪ್ಪರ ವಾಹನದ ಚಾಲಕ ವಾಹನವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿದ್ದು ಇತ್ತು, ನಂತರ ಪೊಲೀಸರು ಆರೋಪಿತನನ್ನು ತೋರಿಸಿ ಗುರುತಿಸುವಂತೆ ಹೇಳಿರುತ್ತಾರೆ, ಈ ಕುರಿತು ಇವರು ಪೊಲೀಸರಿಗೆ ದೂರು ನೀಡಿರುತ್ತಾರೆ, ಟಿಪ್ಪರ ವಾಹನ ವೇಗವಾಗಿ ಬಂದು ಯಲ್ಲಪ್ಪನ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತದೆ , ಎಂದು ಇವರು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ಚಾಸಾ.5/ಪ್ರಾಸಾ.2 ಶ್ರೀ ಚಂದ್ರಶೇಖರ ತಂದೆ ಮಲ್ಲಣ್ಣ ಯಡ್ರಾಮಿ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25.08.2022 ರಂದು, ಮೃತ ಯಲ್ಲಪ್ಪ ಅವರಿಗೆ ಅಳಿಯನಾಗಬೇಕು, ಹಂದರಕಿ ಗ್ರಾಮದ ಗಂಟೆರವಾರಿ ಎಂಬ ಸ್ಥಳದಲ್ಲಿ ಯಲ್ಲಪ್ಪ ಇತನ ಮೊಟಾರ ಸೈಕಲ ಅಪಘಾತವಾಗಿತ್ತು ಒಂದು ಟಿಪ್ಪರ ವಾಹನ ನಂ.KA-32 C-

5379 ವಾಹನ ಯಲ್ಲಪ್ಪನ ಮೋಟಾರ ಸೈಕಲಗೆ ಹಾಯಿಸಿ ಅಪಘಾತಪಡಿಸಿತ್ತು, ಸದರಿ ಟಿಪ್ಪರ ವಾಹನ ಸ್ಪಿಡಾಗಿ ಬಂದು ದ್ವಿಚಕ್ರ ವಾಹನಕ್ಕೆ ಹಾಯಿಸಿತ್ತು,. ಅಪಘಾತ ರಾತ್ರಿ 08.00ಗಂಟೆ ಸುಮಾರು 7 ವರ್ಷಗಳ ಹಿಂದೆ ಆಗಿರುತ್ತದೆ, ಇವರಿಗೆ ಅಪಘಾತದ ವಿಷಯವನ್ನು ಹಿಟ್ಯಾಚಿ ವಾಹನ ಚಾಲಕ ದೇವರಾಜ ಎಂಬುವವರು ಪೋನ ಮೂಲಕ ತಿಳಿಸಿರುತ್ತಾರೆ, ಆಗ ಇವರು ಮತ್ತು ಇವರ ಕಾಕಾ ಶರಣು ಇಟಗಿ ಕೂಡಿಕೊಂಡು ಅಪಘಾತ ಸ್ಥಳಕ್ಕೆ ಹೋಗಿದ್ದು ಯಲ್ಲಪ್ಪನನ್ನು ನೋಡಲಾಗಿ, ತಲೆಗೆ, ಕಾಲಿಗೆ ಮತ್ತು ಮೈಗೆ ಭಾರಿ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದನು, ನಂತರ ಯಲ್ಲಪ್ಪನ ಮೃತ ದೇಹವನ್ನು ಸರಕಾರಿ ಆಸ್ಪತ್ರೆ ಸೇಡಂ ಇಲ್ಲಿಗೆ ತಂದು ಸೇರಿಕೆ ಮಾಡಿರುತ್ತಾರೆ, ಅಪಘಾತ ಟಿಪ್ಪರ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ, ಟಿಪ್ಪರ ವಾಹನದ ಚಾಲಕ ಬಸವರಾಜ ಅಂತಾ ಗೊತ್ತಾಗಿರುತ್ತದೆ, ಇವರು ಸ್ಥಳಕ್ಕೆ ಹೋದಾಗ ಸದರಿ ಬಸವರಾಜ ಟಿಪ್ಪರ ವಾಹನವನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದನು, ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತಾರೆ, ಟಿಪ್ಪರ ವಾಹನ ಮತ್ತು ದ್ವಿಚಕ್ರ ವಾಹನವನ್ನು ನೋಡಿದ್ದಲ್ಲಿ ಗುರುತಿಸುತ್ತಾರೆ, ಸಾಕ್ಷಿ ಪೋಟೋದಲ್ಲಿರುವ ವಾಹನಗಳನ್ನು ಗುರುತಿಸುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 4) ಚಾಸಾ.7/ಪ್ರಾಸಾ.3 ಶ್ರೀ ಬಸವರಾಜ ತಂದೆ ಶಂಕ್ರಪ್ಪ ಇಟಗಿ , ತಮ್ಮ ಸಾಕ್ಷ್ಯದಲ್ಲಿ ದಿನಾಂಕ 12.12.2022 ರಂದು, ಚಾಸಾ-4 ಇವರ ಪರಿಚಯ ಇರುತ್ತದೆ, ಮೃತ ಯಲ್ಲಪ್ಪ ಅವರಿಗೆ ಅಳಿಯನಾಗಬೇಕು, 2017ನೇ ಸಾಲಿನಲ್ಲಿ ರಾತ್ರಿ 09.30ಗಂಟೆಗೆ ಇವರು ಹಂಚಿಲಿ ಗ್ರಾಮದಲ್ಲಿ ಇದ್ದಾಗ ಒಬ್ಬರೂ ಇವರಿಗೆ ಪೋನ ಮಾಡಿ ಒಂದು ಡಂಪರ ವಾಹನ ಮುಂದೆ ಸಾಗುತ್ತಿರುವಾಗ ವಾಹನವನ್ನು ದ್ವಿಚಕ್ರ ವಾಹನಕ್ಕೆ ಹಾಯಿಸಿ ಅಪಘಾತಪಡಿಸಿರುವುದಾಗಿ ವಿಷಯ ಗೊತ್ತಾಗಿರುತ್ತದೆ, ಆಗ ಇವರು ಮತ್ತು ಚಾಸಾ-1 ಹಾಗೂ ರೇವಣಸಿದ್ದಪ್ಪ ಕೂಡಿಕೊಂಡು ಅಪಘಾತ ಸ್ಥಳಕ್ಕೆ ಹೋಗಿರುತ್ತಾರೆ, ಅಪಘಾತ ಸ್ಥಳ ಹೊಸಕೇರಿ ರೋಡ ಇದ್ದು ಅಲ್ಲಿ ಹೋಗಿ ನೋಡಿದಾಗ ಯಲ್ಲಪ್ಪ ಸ್ಥಳದಲ್ಲಿ ಇದ್ದು, ಆತ ಬದುಕಿರಲಿಲ್ಲ, ಅವರಿಗೆ ತಲೆಗೆ ಮತ್ತು ಕೈಗೆ ಪೆಟ್ಟಾಗಿತ್ತು, ಟಿಪ್ಪರ ಚಾಲಕ ಅಲ್ಲಿ ಸ್ಥಳದಲ್ಲಿ ಇರಲಿಲ್ಲ, ನಂತರದಲ್ಲಿ ಪೊಲೀಸರು ಸ್ಥಳಕ್ಕೆ ಬಂದಿದ್ದು, ಯಲ್ಲಪ್ಪ ಇತನನ್ನು ಸರಕಾರಿ ಆಸ್ಪತ್ರೆಗೆ ಸಾಗಾಟ ಮಾಡಿರುತ್ತಾರೆ, ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತಾರೆ, ಅಪಘಾತ ಆದಾಗ ಸಮಯ ರಾತ್ರಿ 08.30 ಆಗಿತ್ತು, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 5) ಚಾಸಾ.3/ಪ್ರಾಸಾ.4 ವಿಜಯಕುಮಾರ ತಂದೆ ಚೆನ್ನಮಲ್ಲಯ ಮಠ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 12.04.2023 ರಂದು, ದಾಖಲೆ ಮೇಲಿರುವ ತಮ್ಮ ಸಹಿ ಗುರುತಿಸಿರುತ್ತಾರೆ, ಸಾಕ್ಷಿ ಗುರುತಿಸಿದ ದಾಖಲೆ ಶವಪಂಚನಾಮೆಯಾಗಿರುತ್ತದೆ, ತಮ್ಮ ಊರಿನ ಯಲ್ಲಪ್ಪ ತಂದೆ ಸುರೇಶ ಇವರು ಅಪಘಾತದಲ್ಲಿ ಮೃತಪಟ್ಟಿದ್ದು ಅವರ ಶವಪಂಚನಾಮೆಯನ್ನು ಸರಕಾರಿ ಆಸ್ಪತ್ರೆ ಸೇಡಂ ಇಲ್ಲಿ ಮಾಡಿರುತ್ತಾರೆ, ಇನ್ನೊಂದು ದಾಖಲೆ ಮೇಲಿರುವ ತಮ್ಮ ಸಹಿ ಗುರುತಿಸಿರುತ್ತಾರೆ, ಸಾಕ್ಷಿ ಗುರುತಿಸಿದ ದಾಖಲೆಯು ಗುನ್ನಾ ಸ್ಥಳದ ಪಂಚನಾಮೆಯಾಗಿರುತ್ತದೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 6) ಚಾಸಾ.10/ಪ್ರಾಸಾ.5 ಸಂತೋಷ್ ರಾಥೋಡ ತಂದೆ ಶಂಕರ್ ರಾಥೋಡ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 06.11.2024 ರಂದು, ಇವರು ದಿಃ 13-06-2016 ರಿಂದ ದಿಃ 19-02-2017 ವರೆಗೆ ಸೇಡಂ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನೀರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ, ದಿ.29.11-2016 ರಂದು ಬೆಳ್ಳಿಗ್ಗೆ 07-15 ಗಂಟೆಗೆ ಠಾಣೆಗೆ ಹಾಜರಾಗಿ ಹೇಳಿಕೆ ಪಿರ್ಯಾದಿಯನ್ನು ನೀಡಿರುತ್ತಾರೆ, ಸದರಿ ಹೇಳಿಕೆಯ ಸಾರಾಂಶದ ಮೇರೆಗೆ ತಮ್ಮ ಠಾಣೆ ಗುನ್ನ ಸಂಖ್ಯೆ 328/16 ನೇದ್ದರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗೆ ಕಳುಹಿಸಿರುತ್ತಾರೆ, ಸಾಕ್ಷಿಯು ಸದರಿ ಪ್ರ ವ ಯನ್ನು ನೋಡಿ ಗುರುತಿಸಿರುತ್ತಾರೆ, ಅದೇ ರೀತಿ ಸದರಿ ಹೇಳಿಕೆಯನ್ನು ನೋಡಿ ಗುರುತಿಸಿರುತ್ತಾರೆ, ನಂತರ ಸದರಿ ಅಪರಾದ ಗಂಭೀರ ಸ್ವರೂಪದ ಅಪರಾದ ಆಗಿರುವುದರಿಂದ ಸದರಿ ಪ್ರಕರಣದ ಕಡತವನ್ನು ಚಾ ಸಾ 11 ರವರಿಗೆ ಮುಂದಿನ ತನಿಖೆಗಾಗಿ ವಹಿಸಿಕೊಟ್ಟಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 7) ಚಾಸಾ.11/ಪ್ರಾಸಾ.6 ಪಂಚಾಕ್ಷರಿ ತಂದೆ ವೀರಯ್ಯ ಸಾಲಿಮಠ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 08.04.2025 ರಂದು, ಇವರು 07-05-2015 ರಿಂದ 12-10-2018 ವರೆಗೆ ಆರಕ್ಷಕ ವೃತ್ತ ನೀರೀಕ್ಷಕರು ಸೇಡಂ ಎಂದು ಕರ್ತವ್ಯ ನಿರ್ವಹಿಸಿರುತ್ತಾರೆ, ಇವರು ದಿಃ 29-11-2016 ರಂದು ಈ ಪ್ರಕರಣದ ಕಡತವನ್ನು ಚಾ ಸಾ 10 ರವರಿಂದ ಪಡೆದುಕೊಂಡು ಪರಿಶೀಲಿಸಲಾಗಿ ಅದೇ ದಿನ ಸರ್ಕಾರಿ ಆಸ್ಪತ್ರೆ ಸೇಡಂ ಗೆ ಭೇಟಿ ನೀಡಿ ಅಪಘಾತದಲ್ಲಿ ಮೃತ ಪಟ್ಟ ಈತನ ಶವಪಂಚನಾಮೆಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 08-30 ರಿಂದ 09-30 ರ ವರೆಗೆ ಜರುಗಿಸಿರುತ್ತಾರೆ, ಸಾಕ್ಷಿಯು ಸದರಿ ಶವ ಪಂಚನಾಮೆಯನ್ನು ನೋಡಿ ಗುರುತಿಸಿರುತ್ತಾರೆ, ದಿ.30-11-2016 ರಂದು ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ ಸಾಕ್ಷಿದಾರರಾದ ಚಾ ಸಾ 4 ರವರು ತೋರಿಸಿದಂತೆ ಅಪಘಾತ ಸ್ಥಳನದ ಪಂಚನಾಮೆಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 09-00 ರಿಂದ 10-00 ಗಂಟೆಯ ವರೆಗೆ ಜರುಗಿಸಿರುತಾರೆ, ಸಾಕ್ಷಿಯು ಸದರಿ ಸ್ಥಳ ಪಂಚನಾಮೆಯನ್ನು ನೋಡಿ ಗುರತಿಸಿರುತ್ತಾರೆ, ಸದರಿ ಪಂಚನಾಮೆಯ ಕಾಲಕ್ಕೆ ಅಪಘಾತಕ್ಕೆ ಒಳಗಾದ ಟಿಪ್ಪರ್ ನಂ. ಕೆ ಎ 32 ಸಿ 5379 ಹಾಗೂ ಮೊಟಾರು ಸೈಕಲ್ ನಂ. ಕೆ ಎ 33 ಜೆ 2042 ನೇದ್ದನ್ನು ಜಪ್ತಿ ಪಡೆದುಕೊಂಡು ನಿರೀಕ್ಷಣೆ ಕುರಿತು ಠಾಣೆಗೆ ತೆಗೆದುಕೊಂಡು ಹೋಗಿದ್ದು, ಅದೇ ರೀತಿ ಸಾಕ್ಷಿಯು ಪಂಚನಾಮೆಯ ಕಾಲಕ್ಕೆ ತೆಗೆದಿರುವ ಟಿಪ್ಪರ್ ಹಾಗೂ ಮೊಟಾರು ಸೈಕಲಿನ ಭಾವ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ, ಅದೇ ದಿನ ಸಾಕ್ಷಿದಾರರಾದ ಚಾ ಸಾ 4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ, ದಿ.05-12-2016 ರಂದು ಈ ಪ್ರಕರಣದ ಆರೋಪಿಯಾದ ಬಸಪ್ಪ ಈತನಿಗೆ ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ, ನಂತರ ಅದೇ ದಿನ ಅಪಘಾತ ಟಿಪ್ಪರ್ ವಾಹನವನ್ನು ಅದರ ಮಾಲೀಕರಿಗೆ ಇಂಡ್ಯೂಮಿನಿಟಿ ಬಾಂಡನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತಾರೆ, ಸಾಕ್ಷಿಯು ಸದರಿ ಇಂಡ್ಯೂಮಿನಿಟಿ ಬಾಂಡನ್ ನೋಡಿ ಗುರುತಿಸಿರುತ್ತಾರೆ, ದಿ. 22-12-2016 ರಂದು ಚಾ ಸಾ 9 ರವರಿಂದ ಎಂ ವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತಾರೆ, ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿರುತ್ತಾರೆ, ನಂತರ ಅದೇ ಚಾ ಸಾ 8 ರವರಿಂದ ಮೃತ ಯಲ್ಲಪ್ಪ ಈತನ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತಾರೆ, ನಂತರ ಅದೇ ದಿನ ಸದರಿ

ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ, , ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 8) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?
ಉಃ

ಪ್ರಶ್ನೆ 9) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?
ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ ಃ 24-02-2026 ಪ್ರ.ದ. ನ್ಯಾ.ದಂ. ಸೇಡಂ.